**<u>ಮೊದಲನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,</u>**

**<u>ಕನಕಪುರ.</u>**

**<u>ಸಿಸಿ ನಂ.209/2007</u>**

ಪಿರ್ಯಾದುದಾರರು ः ಅಬಕಾರಿ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದ ः 2. ರಾಜಲಿಂಗ ಬಿನ್ ಗೌಂಡಪ್ಪ
25 ವರ್ಷ
ತಟ್ಟಿಗಲ್ ಗ್ರಾಮ
ಕೃಷ್ಣಗಿರಿ ತಾಲ್ಲೂಕು, ಧರ್ಮಪುರಿ ಜಿಲ್ಲೆ

:: **<u>ದೋಷಾರೋಪಣೆ</u>** ::

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆಃ-**

ದಿನಾಂಕ:16.09.2005 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಮಾನ್ಯ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಕನಕಪುರ ತಾಲ್ಲೂಕು, ದೊಡ್ಡ ಆಲಹಳ್ಳಿ ಕೋಡಿಹಳ್ಳಿ ರಸ್ತೆಯಲ್ಲಿರುವ ನೇರಳೇದೊಡ್ಡಿ ಗ್ರಾಮದ ಶಾಲಾ ಮುಂಭಾಗದಲ್ಲಿ ಅಬಕಾರಿ ಉಪನಿರೀಕ್ಷಕರು -2 ಜಾರಿ ಮತ್ತು ತನಿಖೆ ಕನಕಪುರ ತಾಲ್ಲೂಕು ಸಿಬ್ಬಂದಿ ಯವರು ರಸ್ತೆ ಕಾವಲು ಮಾಡುತ್ತಿದ್ದಾಗ, 2ನೇ ಆರೋಪಿಯಾದ ನೀವು ಮೃತ 1 ಮತ್ತು 3ನೇ ಆರೋಪಿಗಳ ಜೊತೆ ಸೇರಿಕೊಂಡು ಟಿವಿ ಎಸ್ ಸುಜುಕಿ Ax100R CA2 6090 ವಾಹನದಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ ಸುಮಾರು 20ಲೀಟರ್ ಸೇಂದಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದು, ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13(1) ಮತ್ತು 14 ರ ಪ್ರಕಾರ ಮತ್ತು 32(1), 34, 38 ಮತ್ತು 43(ಎ) ರಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 24.11.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

**2ನೇ ಆರೋಪಿಯ ಹೇಳಿಕೆ**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 24.11.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಕನಕಪುರ**

ಆರೋಪಿಯ ಸಹಿ :